<u>ದಿನಾಂಕಃ 03-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>

<u>ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ.ಪಿ.ಎಸ್.ಪಿ.ವಕೀಲರಿಂದಃ</u>

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಅಪಘಾತ ಫೆಬ್ರವರಿ ತಿಂಗಳ 19 ನೇ ತಾರೀಖು ಆಗಿರುತ್ತದೆ. ಇಸವಿ ನನಗೆ ಈಗ ನೆನಪಿರುವುದಿಲ್ಲ, ಮೂರು ವರ್ಷಗಳ ಹಿಂದೆ ಅಪಘಾತವಾಗಿರುತ್ತದೆ. ಅಪಘಾತವಾದ ತಕ್ಷಣ ನನ್ನನ್ನು ಗುತ್ತಲ ಸರ್ಕಾರಿ ಆಸ್ಪತ್ರೆಗೆ ಕರೆದು ಕೊಂಡು ಹೋಗಿರುತ್ತಾರೆ. ನಂತರ ಹಾವೇರಿ ಜಿಲ್ಲಾ ಆಸ್ಪತ್ರೆಗೆ ಹೋಗಿ ಅಲ್ಲಿಂದ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಹೋಗಿರುತ್ತೇನೆ. ನಂತರ ಅಲ್ಲಿಂದ ಬೆಳಗಾವಿಯ ಕೆಎಲ್ಇ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಚಿಕಿತ್ಸೆಗಾಗಿ ಎರಡುವರೆ ಲಕ್ಷ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಹನದ ಚಾಲಕನಿಗೆ ಚಾಲನಾ ಪರವಾನಿಗೆ ಪತ್ರ ಇತ್ತು ಎಂದರೆ ಸರಿ. ಅಪಘಾತ ಪಡಿಸಿದ ಆಟೋಗೆ ವಿಮಾ ಪಾಲಿಸಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ಅಪಘಾತದ ಸಮಯದಲ್ಲಿ ವಿಮಾ ಪಾಲಿಸಿ ಚಾಲ್ತಿಯಲ್ಲಿರುವುದರಿಂದ 2 ಮತ್ತು 3 ನೇ ಎದುರುದಾರರು ನನಗೆ ಪರಿಹಾರ ಕೊಡಲು ಬಾದ್ಯರು ಎಂದರೆ ಸರಿಯಲ್ಲ. 1 ನೇ ಎದುರುದಾರರನ್ನು ಅನಾವಶ್ಯಕವಾಗಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎನ್.ಡಿ.ವಕೀಲರಿಂದಃ</u>

ಅಪಘಾತಕ್ಕಿಂತ ಪೂರ್ವದಲ್ಲಿ ನಾನು ಆಕಳು ಸಾಕುವ ಕೆಲಸ ಮಾಡುತ್ತಿದ್ದೆ. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ದಿಃ 19-02-1994 ರಂದು ನಾನು ಹುಟ್ಟಿರುತ್ತೇನೆ. ನಾನು ಕೃಷಿ ಕೆಲಸ ಮತ್ತು ಹಾಲಿನ ವ್ಯಾಪಾರದಿಂದ ತಿಂಗಳಿಗೆ 25 ಸಾವಿರ ದುಡಿಯುತ್ತಿದ್ದೆ ಎನ್ನುವ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ಅಪಘಾತದ ದಿನ ನಾನು ಪ್ಯಾಸೆಂಜರ್ ಆಟೋದಲ್ಲಿ ಮೈಲಾರದಿಂದ ಹಾವೇರಿ ಕಡೆಗೆ ಬರುತ್ತಿದ್ದೇನು. ಸದರಿ ಆಟೋದ ಮಾಲೀಕ ನನ್ನ ಸಮ್ಮ ಆಗಿರುತ್ತಾನೆ. ಅಪಘಾತದ ಸಮಯದಲ್ಲಿ ಸದರಿ ಆಟೋದಲ್ಲಿ 6 ಜನ ಇದ್ದೇವು. ಆಟೋದ ಮುಂದಿನ ಸೀಟಿನಲ್ಲಿ ಇಬ್ಬರು ಮತ್ತು ಹಿಂದಿನ ಸೀಟಿನಲ್ಲಿ 4 ಜನ ಕುಳಿತಿದ್ದೇವು. ಮುಂದಿನ ಸೀಟಿನಲ್ಲಿ ನಾನು , ನನ್ನ ತಮ್ಮ ಕುಳಿತಿದ್ದೇವು.

ಮುಂದಿನ ಸೀಟಿನಲ್ಲಿ ಚಾಲಕನಿಗೆ ಮಾತ್ರ ಕುಳಿತುಕೊಳ್ಳಲು ಅವಕಾಶವಿದ್ದು ಬೇರೆಯವರಿಗೆ ಕುಳಿತುಕೊಳ್ಳಲು ಅವಕಾಶ ಇರುವುದಿಲ್ಲ ಎಂದರೆ ಸರಿ. ಅಪಘಾತದಲ್ಲಿ ನನ್ನ ತಮ್ಮನಿಗೆ ಸಣ್ಣ-ಪುಟ್ಟ ಗಾಯಗಳು ಆಗಿದ್ದವು. ಅಪಘಾತ ಎದುರುಬದರು ಆಗಿರುವುದಿಲ್ಲ . ಗೂಡ್ಸ ವಹಿಕಲ್ ನಮ್ಮ ಬಲಭಾಗಕ್ಕೆ ಬಂದು ಡಿಕ್ಕಿ ಪಡಿಸಿರುತ್ತದೆ. ಆಟೋದಲ್ಲಿ 3 ಜನ ಪ್ಯಾಸೆಂಜರ್ ಹಾಗೂ ಡ್ರೈವರ್ ನ್ನು ಹೊರತು ಪಡಿಸಿ ಬೇರೆಯವರಿಗೆ ಪ್ರಯಾಣಿಸಲು ಅವಕಾಶ ಇರುವುದಿಲ್ಲ ಎಂದರೆ ಸರಿ. ಅಪಘಾತದ ದಿನ ನಾನೇ ಆಟೋ ಚಲಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ಪರಿಹಾರ ಬರುವುದಿಲ್ಲ ಎಂದು ಅಪಘಾತದ ದಿನ ನನ್ನ ತಮ್ಮ ಆಟೋ ಓಡಿಸುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಟೋ ಓಡಿಸಲು ನನಗೆ ಡಿ.ಎಲ್ ಇರುತ್ತದೆ. ಸದರಿ ಡಿ.ಎಲ್ ನ್ನು ನಾನು ಹಾಜರು ಪಡಿಸಿರುವುದಿಲ್ಲ. ಡಿ.ಎಲ್ ಇಲ್ಲದೇ ಇದ್ದರೂ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ನಾನು ಮತ್ತು ನನ್ನ ತಮ್ಮ ಗುತ್ತಲ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ಅಪಘಾತದಲ್ಲಿ ನನ್ನ ತಮ್ಮನ ಮುಂಗೈಗೆ ಪೆಟ್ಟಾಗಿರುತ್ತದೆ. ಅಪಘಾತದಲ್ಲಿ ನನ್ನ ತಮ್ಮನಿಗೂ ಸಹ ಪೆಟ್ಟಾಗಿತ್ತು ಎಂದು ಪೊಲಿಸರಿಗೆ ಹೇಳಿರುತ್ತೀರಾ ಎಂದರೆ ಸಾಕ್ಷಿ ನನಗೆ ತುಂಬಾ ಪೆಟ್ಟಾಗಿದ್ದರಿಂದ ನಾನು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ. ಗುತ್ತಲ ಆಸ್ಪತ್ರೆಯಲ್ಲಿ ಬ್ಯಾಂಡೇಜ್ ಹಾಕಿ ಹೆಚ್ಚಿನ ಚಿಕಿತ್ಸೆಗೆ ಹಾವೇರಿಗೆ ಹೋಗಿ ಎಂದು ಕಳುಹಿಸಿರುತ್ತಾರೆ. ಹಾವೇರಿಯಲ್ಲಿ ಎಷ್ಟು ದಿನ ಚಿಕಿತ್ಸೆ ಪಡೆದಿದ್ದಿರಾ ಎಂದರೆ ಸಾಕ್ಷಿ ನನಗೆ ಪ್ರಜ್ಞೆ ಇರಲಿಲ್ಲ ಎಂದು ಹೇಳುತ್ತಾರೆ. ಕೆಎಲ್ಇ ಆಸ್ಪತ್ರೆಗೆ ಹೋದ ನಂತರ ನನಗೆ ಪ್ರಜ್ಞೆ ಬಂದಿರುತ್ತದೆ. ಕೆಎಲ್ಇ ಆಸ್ಪತ್ರೆಯಲ್ಲಿ 3 ತಿಂಗಳು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಬಲಗಾಲಿನ ತೊಡೆಯ ಮೂಳೆ ಮುರಿತವಾಗಿರುತ್ತದೆ. ಕೆಎಲ್ಇ ಆಸ್ಪತ್ರೆಯಲ್ಲಿ ನನ್ನ ಕಾಲಿಗೆ ಅಪರೇಶನ ಮಾಡಿರುತ್ತಾರೆ.

ಕೆಎಲ್ಇ ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದ ನಂತರ ಓಂ ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ. ಕೆಎಲ್ಇ ಆಸ್ಪತ್ರೆಯಿಂದ ಸಂಪೂರ್ಣ ಗುಣಮುಖವಾದ ನಂತರ ನನ್ನನ್ನು ಡಿಸಚಾರ್ಜ ಮಾಡಿರುತ್ತಾರೆ ಎಂದರೆ ಸಾಕ್ಷಿ ಮೆಡಿಸನ್ ಬರೆದು ಕೊಟ್ಟು ಕಳುಹಿಸಿರುತ್ತಾರೆ ಎಂದು ಹೇಳುತ್ತಾರೆ. ಓಂ ಆಸ್ಪತ್ರೆಯಲ್ಲಿ 4 ಬಾರಿ ತೋರಿಸಿರುತ್ತೇನೆ.

ಓಂ ಆಸ್ಪತ್ರೆಯಲ್ಲಿ 4 ಬಾರಿ ತೋರಿಸಿದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಡಿ ಎಂದು ಕೆಎಲ್ಇ ಆಸ್ಪತ್ರೆಯಲ್ಲಿ ಕೇಳಿರುವುದಿಲ್ಲ. ಅಲ್ಲಿ ಕೇಳಲು ತೊಂದರೆ ಇತ್ತೆ ಎಂದರೆ ಸಾಕ್ಷಿ ನನಗೆ ಓಡಾಡಲು ತೊಂದರೆ ಇತ್ತು ಎಂದು ಹೇಳುತ್ತಾರೆ. ಕೆಎಲ್ಇ ಆಸ್ಪತ್ರೆಯ ವೈದ್ಯರು ನನಗೆ ಅಂಗನ್ಯೂನ್ಯತೆ ಕೊಡಲು ಬರುವುದಿಲ್ಲ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲದೇ ಇದ್ದರೂ ಸಹ ಓಂ ಆಸ್ಪತ್ರೆಯಿಂದ ಸುಳ್ಳು ಪ್ರಮಾಣ ಪತ್ರ ಪಡೆದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ಮತ್ತು 10 ರಲ್ಲಿ ಹಣ ಪಾವತಿ ಮಾಡಿದ ಬಗ್ಗೆ ಸಹಿ ಮತ್ತು ಸೀಲು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ಮತ್ತು 10 ನ್ನು ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ರೂ.1,20,000/- ಹೆಚ್ಚುವರಿ ಚಿಕಿತ್ಸೆಗೆ ಬೇಕು ಎಂದು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ.

ನನ್ನ ಸ್ವಂತ ಊರು ಹಾವೇರಿ ತಾಲ್ಲೂಕು ಕನಕಪುರ ಗ್ರಾಮ ಎಂದರೆ ಸರಿ. ನಾನು ಈ ದಿನ ಕನಕಪುರದಿಂದ ಒಬ್ಬನೇ ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿ. ನಾನು ಬಸ್ ನಿಲ್ದಾಣದಿಂದ ನ್ಯಾಯಾಲಯಕ್ಕೆ ನಡೆದು ಕೊಂಡು ಬಂದಿರುತ್ತೇ ಎಂದರೆ ಸರಿ. ಈಗಲೂ ಸಹ ನನ್ನ ದಿನನಿತ್ಯದ ಕೆಲಸಗಳನ್ನು ನಾನೇ ಮಾಡಿಕೊಳ್ಳುತ್ತೇನೆ ಎಂದರೆ ಸರಿಯಲ್ಲ. ನಾನು ಈಗಲೂ ಎಲ್ಲಾ ಕೆಲಸಗಳನ್ನೂ ಮಾಡುತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ವಾಹನಕ್ಕೆ ಯಾವುದೇ ವಿಮಾ ಪಾಲಿಸಿ ಇರಲಿಲ್ಲ ಆದ್ದರಿಂದ 2 ನೇ ಎದುರುದಾರರು ಕಂಪನಿಯವರು ಯಾವುದೇ ಪರಿಹಾರ ಕೊಡಲು ಬಾದ್ಯರಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಅಪಘಾತ ಪಡಿಸಿದ ವಾಹನದ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಆದ್ದರಿಂದ 2 ನೇ ಎದುರುದಾರರು ಕಂಪನಿಯವರು ಯಾವುದೇ ಪರಿಹಾರ ಕೊಡಲು ಬಾದ್ಯರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.